ಇಲ್ಲ ಯಾವಾಗ್ಲೂ ನಗ್ತಾನೇ ಇರ್ತಿದ್ಲು ಅಂತ ಕಣ್ಣು ಅಷ್ಟು ಚೆಂದ ಕಾಣ್ತಿದ್ದವ್ರೋ' ಅನ್ನೋ ಹುಚ್ಚುಚ್ಚಾರ ವಿಚಾರ ಬಂತು, ಯಾಕೋ ಹೊಟ್ಟೆಯಲ್ಲಿ ಒಂಥರಾ ಸಂಕಟವಾಗಿ ಎದ್ದು ಟೇಬಲ್ ಮೇಲಿದ್ದ ಹೂಜಿಯಿಂದ ನೀರು ಕುಡಿದು ಪುಟ್ಟ ಅಲಾರಾಂ ಗಡಿಯಾರವನ್ನೇ ದಿಟ್ಟಿಸಿದ; ಇನ್ನೂ ಐದೂವರೆ. ಮತ್ತೆ ಮಂಚದ ಮೇಲೆ ಉರುಳಿಕೊಂಡು ಮಧುವನ್ನು ನೋಡುವ ಕೆಲಸ ಮುಂದುವರೆಸಿದ. 'ಏನೇ ಆಗ್ಲಿ ಮಲಗಿದಾಗಲೇ ಹೆಚ್ಚು ಚೆಂದ ಕಾಣ್ತಾಳೆ ಇಕೀ. ಮುಂಜಾನಾಯಿತೋ ದೇವಿ ಮೈಮೇಲೆ ಬಂದಂತೆ ಕೆಲಸ ಶುರು ಮಾಡ್ತಾಳೆ, ಅತ್ಲಾಗೆ ಟೇಬಲ್ ಮೇಲೆ ಕಾಯಿಪಲ್ಲೆ ಹೆಚ್ತಾನೇ ಇತ್ಲಾಗೆ ಗ್ಯಾಸ್ ಮೇಲೆ ಚಹಾಕ್ಕೆ ನೀರಿಡೋದು, ನಡುವೆ ಅದನ್ನು ಕುದಿಯಲು ಬಿಟ್ಟು ಬೆಡ್ ರೂಮಿಗೆ ಹೋಗಿ ತನ್ನ ಕಾಟನ್ ಸೀರೆಗೆ ಇಸ್ತ್ರಿ ಹಾಕೋದು; ಚಹ ಕುದ್ದು ಕುದ್ದು ತಳ ಹತ್ತಬೇಕು ಆಗ ಓಡಿ ಬಂದು ಗ್ಯಾಸ್ ಬಂದ್ ಮಾಡಿ ಮತ್ತೆ ಓಡ್ತಾನೇ ವಾಪಸ್ ಹೋಗಿ ಇಸ್ತ್ರಿಯ ಸ್ವಿಚ್ ಬಂದ್ ಮಾಡೋದು – ಇದಕ್ಕೆ ಮಲ್ಟಿ ಟಾಸ್ಕಿಂಗ್ ಅಂತ ಯಾಂವ ಹೆಸರಿಟ್ಟನೋ ಗೊತ್ತಿಲ್ಲ, ಇದು ಮಲ್ಟಿ ಡ್ಯಾಮೇಜಿಂಗ್ ಅಂತ ಯೋಚಿಸುವಾಗಲೇ ಅಲಾರಾಂ ಕೂಗಿತ್ತು, ಮಧು ಧಡಕ್ಕೆಂದು ಎದ್ದು ಕೂತಿದ್ದಳು. ಹೌಸ್ ಕೋಟಿನಿಂದೀಚೆಗೆ ಸರಿದ ಬ್ರಾ ಪಟ್ಟಿಯನ್ನು ನಾಜೂಕಾಗಿ ಒಳಸರಿಸಿಕೊಂಡು ಚೂಪು ಕಡ್ಡಿಗಳಂತೆ ನೇರವಾದ ಕೂದಲನ್ನು ಎತ್ತಿ ಕಟ್ಟಿ ಅಡುಗೆಮನೆಗೆ ಹೋದಳು. ಏನೋ ಗಿರ್ ಗರ್ ಅಂತ ಒಳಗಿನಿಂದ ಸದ್ದು ಬಂತು ಮುಂದ್ಯೆದೇ ನಿಮಿಷಗಳಲ್ಲಿ ಚೂರೇ ಚೂರು ಜಾಮ್ ಮುಟ್ಟಿಸಿದ ಟೋಸ್ಟ್ ತುಣುಕನ್ನು ಅಗೆಯುತ್ತಲೇ ಬಂದವಳು ಇವನ ಹೊಟ್ಟೆಯ ಮೇಲೆ ಮೇಲೆ ಬಾಗಿ ಆಚೆಕಡೆಯ ದಿಂಬಿನಡಿಯಿಂದ ತನ್ನ ಸೆಲ್ ಫೋನ್ ಎತ್ತಿಕೊಂಡಳು. 'ಘಂ' ಅಂತ ಅವಳ ಮುಖದಿಂದ ಹೊರಟ ಫೇಸ್ ವಾಶ್ ನ ಕಂಪಿಗೆ ಸನಿಹ ಹೋಗಲಿಕ್ಕೂ ಅಂಜಿಕೆಯಾಯ್ತವನಿಗೆ. ಮುಂಚೆಲ್ಲ ನಿದ್ರೆ ತಿಳಿದ ಮೇಲೂ ಒತ್ತಿ ಮಲಗುವದಿತ್ತು, ಒಬ್ಬರ ಕಿವಿಯಲ್ಲಿ ಇನ್ನೊಬ್ಬರು ಕಚಗುಳಿ ಮಾಡುವುದಿತ್ತು.

ಒಮ್ಮೆಲೆ ಅದೇನು ಹುಕಿ ಬಂತೋ ಅವಿನಾಶ ಕಣ್ಮುಚ್ಚಿಕೊಂಡೇ ಕಿಡಕಿಯ ಅಂಚಿನ ಮೇಲಿದ್ದ ಹೂದಾನಿಯಿಂದ ಎಳೆಯ ದೇಟೊಂದನ್ನು ಎತ್ತಿಕೊಳ್ಳಲು ಕೈಯಾಡಿಸಿದ. ಏನೋ ಚಕ್ಕೆಂದು ಬೆರಳಿಗೆ ಚುಚ್ಚಿದಾಗ ಬೆಚ್ಚಿ ಕಣ್ಬಿಟ್ಟ. ಅಲ್ಲಿ ಹಿತ್ತಾಳೆಯ ಹೂದಾನಿಯೇ ಇಲ್ಲ, ಅದರಲ್ಲಿ ಯಾವಾಗಲೂ ಇರೋ ತಾಜಾ ಗುಲಾಬಿ, ದಾಸವಾಳದ ಗೊಂಚಲು ಕಡೆಗೆ ಬೋಗನ್ ವಿಲ್ಲಾ ಕೂಡಾ ಇಲ್ಲ, ಬದಲಿಗೆ ಗುಂಡನೆಯ ನೀಲಿ ಪ್ಲಾಸ್ಟಿಕ್ ಫ್ಲಾವರ್ ಪಾಟ್ ಇದೆ; ಅದರ ತುಂಬಾ ಬಣ್ಣ ಹಚ್ಚಿಟ್ಟ ಅಡಿಕೆ ಗೊಂಚಲು - ಬಿದಿರಿನ ಕಡ್ಡಿಗಳು, ಇನ್ನು ಕೆಲವು ಒಣಗಿದ ಜೋಳದ ತೆನೆಗಳು, ಒಂದೂ ಹಸಿರು ದೇಟಿಲ್ಲ, ಹೂವೂ ಇಲ್ಲ, ಅದರತ್ತಲೇ ದಿಗ್ಭ್ರಾಂತನಂತೆ ನೋಡ್ತಾ 'ಯಾವಾಗ ಪಾಟ್ ಬದಲಿಸಿದಳಿವಳು? ನಾ ನೋಡಲೇ ಇಲ್ಲವಲ್ಲ' ಅಂತ ವಿಚಾರ ಮಾಡಿದ, ಬೆರಳತುದಿಗೆ ಕೂತ ಕೆಂಪು ಬಿಂದುವನ್ನು ಚೀಪಿಕೊಳ್ಳುವಾಗಲೇ ಮಧು ತಿರುಗಿ ಅಡುಗೆ ಮನೆಗೆ ಹೋಗಿಯಾಗಿತ್ತು. ಥತ್ತೇರಿ ಅಂತ ಜೋರಾಗಿ ಕೊಡವಿದ ಕೈ ಹೂದಾನಿಗೆ ಬಡಿದು ಅದು ನೆಲಕ್ಕೆ ಬೀಳುವಷ್ಟರಲ್ಲಿ ಸೂಪರ್ ಮ್ಯಾನ್ ನಂತೆ ಜಿಗಿದೆದ್ದು ಹಿಡಿದುಕೊಂಡನವ. ಆದರೆ ಬಿದಿರು - ಅಡಕೆ ಗೊಂಚಲುಗಳು ಮಾತ್ರ ನೆಲದ ಮೇಲೆ ಬಿದ್ದು ಚೆಲ್ಲಾಪಿಲ್ಲಿಯಾದವು. ಕೆಲವು ಮುರಿದೂ ಹೋದವು.

'ಓ ಶಿಟ್!'ಎಂದು ಕೂಗಿ ಗಡಬಡಿಸಿ ಎದ್ದು ಸ್ಟೋರ್ ರೂಮ್ ಗೆ ಓಡಿದ ಅವಿನಾಶ ಫೆವಿಕ್ವಿಕ್ ತಂದು ಮುರಿದ ಕೆಲ ಕಡ್ಡಿಗಳನ್ನು ಜೋಡಿಸುತ್ತ ಕೂತ. ತುದಿಗಳು ಏನು ಮಾಡಿದರೂ ಅಂಟಲೇ ಇಲ್ಲ. ಕಡೆಗೆ ಬೇಜಾರಾಗಿ ಪಾಟ್ ನ ಸಮೇತ ಕಡ್ಡಿಗಳನ್ನು ಒಂದು ಪ್ಲಾಸ್ಟಿಕ್ ಕವರ್ ಗೆ ಹಾಕಿ ಪುಸ್ತಕದ ಶೆಲ್ಫ್ ನ ಹಿಂಭಾಗಕ್ಕೆ ಅಡಗಿಸಿಟ್ಟ.

'ಓಹೋ ಮಧ್ಯಾಹ್ನ ಇವಳ ಕಿಟ್ಟಿಪಾರ್ಟಿಯಿದೆ ಮನೆಯಲ್ಲಿ ಅದಕ್ಕೇ ದಿನಕ್ಕಿಂತ ಇವತ್ತು ಹೆಚ್ಚಿನ ಗಡಿಬಿಡಿ' ಅಂತ ನೆನಪಾಯ್ತವನಿಗೆ. ಮಜವೆಂದರೆ ಪಾರ್ಟಿಗೆ ಬರುವ ಹೆಂಗಸರೆಲ್ಲಾ ಅವಿನಾಶನಿಗೆ ಒಂದೇ ತರ ಕಾಣ್ತಾರೆ ಥೇಟ್ ಮ್ಯಾನಕ್ವೀನ್‌ಗಳಂತೆ! ಎಲ್ಲರ ತುಟಿಗಳೂ ಗಿಳಿಚುಂಚಿನಂತೆ ಕೆಂಪು, ಎಲ್ಲರ ಕೆನ್ನೆಗಳೂ ತಗ್ಗುದಿನ್ನಿಗಳನ್ನೆಲ್ಲ ಉಜ್ಜಿ ತೆಗೆದು ಸಪಾಟು ಮಾಡಿದ ಮೊಸಾಯಿಕ್ ಟೈಲ್‌ಗಳೇ, ಇವ ಕದ್ದು ಒಮ್ಮೊಮ್ಮೆ ಅವರ ಮಾತಾಲಿಸುವುದಿತ್ತು. 'ಯುಗಾದಿ ಆಚರಿಸಲು ಯಾವ ಅನಾಥಾಶ್ರಮಕ್ಕೆ ಹೋಗ್ಬೇಕು? ಈ ಬಾರಿ ಹಣ್ಣು ಹಂಪಲು ಹಂಚಬೇಕೇ ಇಲ್ಲಾ ಮಿಠಾಯಿಯಾ?' - ಬರೀ ಇಂಥ ಮಾತೇ ಎಲ್ಲ. 'ಎಲ್ಲಾ ನಾಟಕ ಕಂಪನಿ' ಅಂತ ಗೊಣಗಿಕೊಂಡರೂ ತಮ್ಮ ಮನೆಯಲ್ಲಿ